ಸಾಕ್ಷಿಯ ಹೆಸರುಃ ಫೈಜ್ ಅಹಮ್ಮದ್ ಖಾನ್

ದಿನಾಂಕ 16-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎಸ್. ವಕೀಲರಿಂದಃ

8) ನಾನು ದಾವಾ ಷೆಡ್ಯೂಲ್ ಸ್ವತ್ತನ್ನು ಮೊದಲಿನಿಂದಲೂ ನೋಡಿರುವುದಿಲ್ಲ. ನಾನು ಹುಟ್ಟಿ ಬೆಳದು ವಾಸವಾಗಿರುವುದು ಕೆ.ಆರ್. ನಗರದಲ್ಲಿ. ದಾವಾ ಷೆಡ್ಯೂಲ್ ಸ್ವತ್ತು ಹಾಸನ-ಮೈಸೂರ ಮುಖ್ಯ ರಸ್ತೆಯಲ್ಲಿದೆ ಎಂದರೆ ಸರಿ. ಈ ಜಾಗದಲ್ಲಿ ಮೊದಲು ಮೂರು ಅಂಗಡಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಈ ಮೂರು ಅಂಗಡಿಗಳ ಪೈಕಿ ಒಂದು ಅಂಗಡಿ ಕಟಿಂಗ್ ಶಾಪ್, ಒಂದು ಲಾಂಡ್ರಿ ಹಾಗೂ ಒಂದು ನಶ್ಯದ ಅಂಗಡಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ಅಂಗಡಿಗಳಲ್ಲಿದ್ದ ಬಾಡಿಗೆದಾರರನ್ನು ತಗಾದೆ ತೆಗೆದು ಜೈಬುನ್ನಿಸಾ ರವರು ತಿಳುವಳಿಕೆ ನೋಟಿಸನ್ನು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ದಿನಾಂಕಃ 01.10.2009 ಮತ್ತು ದಿನಾಂಕಃ 09.11.2009 ರಂದು ಜೈಬುನ್ನಿಸಾರವರು ಆ ಅಂಗಡಿಗಳಲ್ಲಿದ್ದ ಬಾಡಿಗೆದಾರರಿಗೆ ಅಟಾರ್ನಮೆಂಟ್ ನೋಟೀಸು ಕೊಟ್ಟು, ಅದರಲ್ಲಿ ರುಕ್ಸಾನ ತಬ್ಸಮ್ ರವರನ್ನು ತಮ್ಮ ಅಟಾರ್ನಿಯಾಗಿ ನೇಮಕ ಮಾಡಿಕೊಂಡಿರುವ ಬಗ್ಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಟಾರ್ನಮೆಂಟ್ ನೋಟೀಸಿನಲ್ಲಿ ಜೈಬುನ್ನಿಸಾರವರು ದಾವಾ ಷೆಡ್ಯೂಲ್ ಸ್ವತ್ತನ್ನು ತಮ್ಮ ಗಂಡ ಹಾಗೂ ಗಂಡನ ಅಣ್ಣನಾದ ಅಬ್ದುಲ್ ರಜಾಕ್‌ರವರ ಮಧ್ಯೆ ವಿಭಾಗ ಮಾಡಿಕೊಂಡಿಲ್ಲವೆಂದು ತಿಳಿಸಿರುವ ವಿಚಾರ ನನಗೆ ಗೊತ್ತಿಲ್ಲ. ರುಕ್ಸಾನ ತಬ್ಸಮ್ ರವರು ಅಟಾರ್ನಮೆಂಟ್ ದಾಖಲೆಯ ಆಧಾರದ ಮೇಲೆ ಮಹದೇವ್ ಎನ್ನುವವರ ಮೇಲೆ ಬಾಡಿಗೆಗೆ ಕೊಟ್ಟ ಸ್ವತ್ತನ್ನು ಬಿಡಿಸಿಕೊಳ್ಳಲು ಅಸಲು ದಾವಾ ಸಂಖ್ಯೆ2/2010 ರಂತೆ ದಾಖಲಿಸಿದ್ದು, ಸದರಿ ದಾವೆ ಡಿಕ್ರಿ ಆದ ವಿಚಾರ ನನಗೆ ಗೊತ್ತಿಲ್ಲ . ಸದರಿ ಅಟಾರ್ನಮೆಂಟ್ ನೋಟೀಸಿನಲ್ಲಿ ತಿಳಿಸಿರುವ ಷೆಡ್ಯೂಲ್ ಸ್ವತ್ತುಗಳು ಹಾಗೂ ಅದರ ಅಕ್ಕಪಕ್ಕದ ಸ್ವತ್ತುಗಳು ರುಕ್ಸಾನ ತಬ್ಸಮ್ ರವರಿಗೆ ಸೇರಿರುತ್ತವೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

9) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಜೈಬುನ್ನಿಸಾರವರಿಗೆ ಕನ್ನಡ ಓದಲು ಬರೆಯಲು ಬರುತ್ತಿರಲಿಲ್ಲ ಹಾಗೂ ಪತ್ರ ಬರಹಗಾರರು ಜೈಬುನ್ನಿಸಾರವರಿಗೆ ಗೊತ್ತಿಲ್ಲದಂತೆಯೇ ಮೋಸ ಮಾಡಿ ದಾನಪತ್ರ ಬರೆದಿರುತ್ತಾರೆ ಎಂಬ ವಿಷಯ ನಿಜವಾಗಿರುತ್ತದೆ. ನಾನು ಮತ್ತು ನನ್ನ ಅಣ್ಣ ಸೇರಿ ಅಸಲು ದಾವಾ ಸಂಖ್ಯೆ: 363/2015 ಅನ್ನು ಕೆ.ಆರ್.ನಗರದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೊಹಮ್ಮದ್ ಅಫ್ಜಲ್ ಮತ್ತು ನಜರ್ ಉನ್ನಿಸಾ ರವರ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ: 363/2015 ರನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನು ಮತ್ತು ನನ್ನ ಅಣ್ಣ ನೀಡಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಜೈಬುನ್ನಿಸಾರವರು ಸರ್ಕಾರಕ್ಕೆ ನೀಡಿರುವ ಸ್ಟಾಂಪ್ ಡ್ಯೂಟಿಯನ್ನು ತಪ್ಪಿಸಲು ದಾನಪತ್ರದಲ್ಲಿ ತಮ್ಮ ಮಕ್ಕಳು ಎಂದು ನಮೂದು ಮಾಡಿತ್ತಾರೆ ಎಂದು ತಿಳಿಸಿರುತ್ತೇವೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ: 363/2015 ರಲ್ಲಿನ ದಾವಾಪತ್ರದಲ್ಲಿ ನನ್ನ ಸಹಿ ಇದೆ.

10) ಕೆ.ಆರ್.ನಗರದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 431/2014 ನ್ನು ಆಸಿಫ್ ಉಮರ್ ಎಂಬುವವರು ಮೊಹಮ್ಮದ್ ಅಫ್ಜಲ್ (2 ನೇ ಪ್ರತಿವಾದಿ) ರವರ ವಿರುದ್ಧ ದಾವಾಸ್ವತ್ತುಗಳ ಮೇಲೆ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ದಾವಾಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 50 ಅಡಿ ಮತ್ತು ಉತ್ತರ-ದಕ್ಷಿಣ 09 ಅಡಿ ಎಂದು ನಮೂದಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ: 431/2014 ರಲ್ಲಿನ ದಾವಾಸ್ವತ್ತನ್ನೇ ನಾವು ಆಸಿಫ್ ಉಮರ್ ರವರಿಂದ ಖರೀದಿಸಿರುತ್ತೇವೆ ಎಂದರೆ ಸರಿ. ಈ ಕೇಸಿನ ವಾದಿಗಳ ಮೇಲೆ ಶ್ರೀಮತಿ ಎಂ.ಕೆ.ಜೈಬುನ್ನಿಸಾ ರವರು ಕೆ.ಆರ್.ನಗರದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 213/2015 ದಾವೆಯನ್ನು ದಾಖಲು ಮಾಡಿದ್ದ ವಿಚಾರ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ: 213/2015 ರಲ್ಲಿ ಶ್ರೀಮತಿ ಎಂ.ಕೆ.ಜೈಬುನ್ನಿಸಾ ರವರ ಪರವಾಗಿ ದಿನಾಂಕ:23.04.2015 ರಂದು ಏಕಪಕ್ಷೀಯವಾಗಿ

ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಪಡೆದುಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ: 213/2015 ಚಾಲ್ತಿಯಲ್ಲಿರುವಾಗಲೇ ನಾವು ದಾವಾಸ್ವತ್ತನ್ನು ಕೊಂಡಿದ್ದೆವು ಎಂದರೆ ಸರಿ. ಈ ಸ್ವತ್ತನ್ನು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರಿಂದ ಕೊಳ್ಳುವಾಗ ಅವರು ಈ ಎಲ್ಲಾ ನ್ಯಾಯಾಲಯದ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ನಮಗೆ ನೀಡಿರುವುದಿಲ್ಲ. ನಾನು ಮತ್ತು ನನ್ನ ಅಣ್ಣ ಸೇರಿ ಕೆ.ಆರ್.ನಗರದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಾದಗಳ ಮೇಲೆ ಅಸಲು ದಾವಾ ಸಂಖ್ಯೆ: 411/2015 ಮತ್ತು ಅಸಲು ದಾವಾ ಸಂಖ್ಯೆ:414/2015 ದಾಖಲಿಸಿರುತ್ತೇವೆ ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎನ್ನುತ್ತಾರೆ. ನಂತರ ನಾವು ಈ ನ್ಯಾಯಾಲಯದಲ್ಲಿ ಈ ಅಸಲು ದಾವಾ ಸಂಖ್ಯೆ: 30/2015 ರಲ್ಲಿ ವಕೀಲರನ್ನು ನೇಮಕ ಮಾಡಿಕೊಂಡು ತಕರಾರನ್ನು ಸಲ್ಲಿಸಿದ್ದೆವು ಎಂದರೆ ಸರಿ. ನಾವು ಈ ಪ್ರಕರಣದಲ್ಲಿ ಹಾಜರಾದ ನಂತರ, ಈ ನ್ಯಾಯಾಲಯದಿಂದ ಈ ದಾವೆಯಲ್ಲಿ ಸ್ಟೇಟಸ್ ಕೋ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಸ್ಟೇಟಸ್ ಕೋ ಆದೇಶವನ್ನು ಮರೆ ಮಾಚಿ, ಅಸಲು ದಾವಾ ಸಂಖ್ಯೆ: 411/2015 ಮತ್ತು ಅಸಲು ದಾವಾ ಸಂಖ್ಯೆ: 414/2015 ರಲ್ಲಿ ಏಕಪಕ್ಷೀಯ ಆದೇಶವನ್ನು ಪಡೆದಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಂತರ ಈ ಕೇಸಿನ ವಾದಿಗಳು ಅಸಲು ದಾವಾ ಸಂಖ್ಯೆ: 414/2015 ರಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ನಾವು ಸಲ್ಲಿಸಿದ ವಾದಪತ್ರ ತಿರಸ್ಕೃತಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ ಸದರಿ ಅಸಲು ದಾವಾ ಸಂಖ್ಯೆ: 411/2015 ಮತ್ತು ಅಸಲು ದಾವಾ ಸಂಖ್ಯೆ: 414/2015 ರಲ್ಲಿ ಮಧ್ಯಂತರ ನಿರ್ಬಂಧಕಾಜ್ಞೆ ಪಡೆದ ನಂತರ ಪೋಲೀಸ್ ಸಹಾಯವನ್ನು ಪಡೆಯಲು ಅರ್ಜಿ ಸಲ್ಲಿಸಿ ಆದೇಶವನ್ನು ಪಡೆದಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಈ ಪೋಲೀಸ್ ಸಹಾಯದ ಆದೇಶದ ಮೇರೆಗೆ ನಾನು ಮತ್ತು ನನ್ನ ಅಣ್ಣ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿರುವ ವಾದಿಗಳ ಸ್ವಾಧೀನದಲ್ಲಿದ್ದ ಟೀ ಅಂಗಡಿಯನ್ನು ಹೊಡೆಯಲು ಹೋಗಿದ್ದೆವು ಎಂದರೆ ನನಗೆ ಗೊತ್ತಿಲ್ಲ.

11) ಅಸಲು ದಾವಾ ಸಂಖ್ಯೆ: 30/2015 ರ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ಶ್ರೀಮತಿ ಎಂ.ಕೆ.ಜೈಬುನ್ನಿಸಾ ಮತ್ತು ಅವರ ಗಂಡ ನಿಸ್ಸಾರ್ ಅಹಮ್ಮದ್ ರವರು ಈ

ದಾವೆ ಹಾಕುವ ಮುನ್ನ ಹಾಗೂ ಹಾಕಿದ ನಂತರ ಯಾವ ಪರಿಸ್ಥಿತಿಯಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಮ್ಮನ್ನು ಪ್ರತಿನಿಧಿಸಲು ಬೇರೆ ವಕೀಲರು ಇದ್ದರು ಎಂದರೆ ಸರಿ. ನಮ್ಮ ವಕೀಲರು ನಮ್ಮ ಪರ ಸಲ್ಲಿಸಿದ ತಕರಾರು ಪ್ರತಿವಾದ ಪತ್ರವನ್ನು ನನ್ನ ಅಣ್ಣ ಹೇಳಿ ಬರೆಯಿಸಿರುತ್ತಾರೆ. ನಮ್ಮ ವಕೀಲರು ಮಧ್ಯಂತರ ಅರ್ಜಿಗೆ ಸಲ್ಲಿಸಿದ ಲಿಖಿತ ವಾದಮಂಡನೆಯಲ್ಲಿ ಮೊಹಮ್ಮದ್ ಕಾನೂನಿನ ಪ್ರಕರಣ ನಿಸ್ಸಾರ್ ಅಹಮ್ಮದ್ ತೀರಿಕೊಂಡ ನಂತರ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರು ಒಬ್ಬರೇ ವಾರಸುದಾರರಾಗಿದ್ದು ಅವರಿಗೆ ದಾವಾಸ್ವತ್ತು ಸೇರಬೇಕು ಎಂದು ಬರೆದಿರುವ ವಿಚಾರ ಸರಿ ಇರುತ್ತದೆ. ಸದರಿ ಲಿಖಿತ ವಾದಮಂಡನೆಯಲ್ಲಿ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರು ದಿನಾಂಕಃ 03.07.1937 ರಂದು ಮಾಡಿಕೊಂಡ ವಿಭಾಗಪತ್ರದ ಪ್ರಕಾರ ಖಾತೆ ಮಾಡಿಸಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ವಿಷಯವನ್ನು ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಆ ಸಮಯದಲ್ಲಿ ನಮ್ಮ ವಕೀಲರಿಗೆ ಹಿಬಾ ನಾಮಾ ಇತ್ತು ಎಂದು ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವಿಷಯ ನಮ್ಮ ಅಣ್ಣನಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಅದೇನೂ ನನಗೆ ಗೊತ್ತಿಲ್ಲ. ನನಗೆ ಪಿರಿಯಾಪಟ್ಟಣ ತಾಲ್ಲೂಕು ಪಂಚವಳ್ಳಿ ಗ್ರಾಮದ ಮೊಹಮ್ಮದ್ ಷೇಕ್ ರವರು ಗೊತ್ತಿಲ್ಲ. ಮೊಹಮ್ಮದ್ ಇಬ್ರಾಹಿಂ ಬಿನ್ ಮೊಹಮ್ಮದ್ ಹುಸೇನ್ ರವರು ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ಕೊಳ್ಳುವ ಮೊದಲು ದಾಖಲೆಗಳನ್ನು ಪಡೆದುಕೊಂಡ ನಂತರ ನಾವು ಯಾವುದೇ ವಕೀಲರನ್ನು ಭೇಟಿ ಮಾಡಿ ಕಾನೂನಿನ ಅಭಿಪ್ರಾಯವನ್ನು ಪಡೆದುಕೊಂಡಿಲ್ಲ. ಮೊದಲು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರ ಪರ ದಾವೆಗೆ ಹಾಜರಾದ ವಕೀಲರು, ಆಸಿಫ್ ಉಮರ್ ರವರ ಪರ ದಾವೆಗೆ ಹಾಜರಾದ ವಕೀಲರು ಹಾಗೂ ನಮ್ಮ ಪರ ದಾವೆಗೆ ಹಾಜರಾದ ವಕೀಲರು ಒಬ್ಬರೇ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆಃ 213/2015 ರಲ್ಲಿ ನಮ್ಮ ಪರ ಹಾಜರಾದ ವಕೀಲರು ಈ ದಾವೆಯಲ್ಲೂ ಕೂಡ ನಮ್ಮ ಪರ ಹಾಜರಾಗಿದ್ದರು ಎಂದರೆ ಸರಿ. ಅಸಲು ದಾವಾ ಸಂಖ್ಯೆಃ 213/2015 ನ್ನು ದಿನಾಂಕಃ 26.02.2016 ರಂದು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರು ಹಿಂಪಡೆದಿರುವ ವಿಚಾರ ನನಗೆ ಗೊತ್ತಿಲ್ಲ.

12) ದಿನಾಂಕಃ 01.06.2015 ರಂದು ನಿಡಿ-05 ಪ್ರಕಾರ ದಾವಾಸ್ವತ್ತನ್ನು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರಿಂದ ನಾವು ಕ್ರಯಕ್ಕೆ ಕೊಂಡಿದ್ದು ಸದರಿ ಪತ್ರವನ್ನು ನನ್ನ ಅಣ್ಣ ತಯಾರಿಸಿಕೊಂಡು ಬಂದಿದ್ದರು. ಸದರಿ ಕ್ರಯಪತ್ರದಲ್ಲಿ ಹಿಬಾ ನಾಮಾದ ಮೂಲಕ ದಾವಾಸ್ವತ್ತು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರಿಗೆ ಬಂದಿತ್ತು ಎಂದು ಬರೆಯಿಸಿರುವುದಿಲ್ಲ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿರುವಾಗ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರಿಂದ ನಿಡಿ-06 ರ ಪ್ರಕಾರ ತಿದ್ದುಪಡಿ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದೆವು ಎಂದರೆ ಸರಿ ನಿಡಿ-06 ರಲ್ಲಿ ತಿದ್ದುಪಡಿ ಕ್ರಯಪತ್ರ ಬರೆದುಕೊಡುವವರ ಹೆಸರು ಶ್ರೀಮತಿ ಎಂ.ಕೆ.ಜೈಬುನ್ನಿಸಾ ಎಂದು ಬರೆದಿದೆ ಎಂದರೆ ಸರಿ. ಶ್ರೀಮತಿ ಎಂ.ಕೆ.ಜೈಬುನ್ನಿಸಾರವರು ತೀರಿಕೊಂಡಾಗ ಅವರ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಡಿ-06 ರಲ್ಲಿ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರ ವಯಸ್ಸು 80 ವರ್ಷ ಎಂದು ಬರೆದಿದೆ. ಹಿಬಾ ನಾಮಾದಲ್ಲಿರುವ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರ ವಯಸ್ಸು 50 ವರ್ಷ ಎಂದು ನಮೂದಿಸಿದೆ ಹಾಗೂ ನಿಡಿ-06 ರಲ್ಲಿ ಅವರ ವಯಸ್ಸು 86 ಎಂದು ನಮೂದಿಸಿದ್ದು ಈ ಎರಡೂ ದಾಖಲೆಗಳಲ್ಲಿ ಯಾವುದು ಸರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ-01 ರಲ್ಲಿ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರ ವಯಸ್ಸು 72 ವರ್ಷ ಎಂದು ನಮೂದಿಸಿದ್ದು ಇದು ಸರಿಯೋ ತಪ್ಪೋ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

13) ನಿಡಿ-08 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಏನು ಬರವಣಿಗೆಯಾಗಿದೆ ಎಂದು ಕೇಳಿದಾಗ ಸಾಕ್ಷಿ ಕನ್ನಡ ಓದಲು ಬರೆಯಲು ಬರುವುದಿಲ್ಲ ಎನ್ನುತ್ತಾರೆ. ನಿಡಿ-08 ರಲ್ಲಿ ದಿನಾಂಕಃ 03.07.1937 ರ ವಿಭಾಗ ಪತ್ರ ಮತ್ತು ಪ್ರಮಾಣ ಪತ್ರದ ಆಧಾರದ ಮೇಲೆ ಶ್ರೀಮತಿ ಎಂ.ಕೆ.ಜೈಬುನ್ನಿಸಾರವರ ಹೆಸರು ನಮೂದಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-08 ರಲ್ಲೂ ಕೂಡ ಹಿಬಾ ನಾಮಾದ ಕುರಿತು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-45 ಹಿಬಾ ನಾಮಾವನ್ನು ಯಾರು ಯಾವಾಗ ನಿಮಗೆ ಕೈಗೆ ಕೊಟ್ಟರು ಎಂದು ಕೇಳಿದಾಗ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಅಂದಾಜು ಎಷ್ಟು ವರ್ಷಗಳ ಹಿಂದೆ ಈ ದಾಖಲೆಯನ್ನು ಕೊಟ್ಟಿದ್ದರು ಎಂದು

ಕೇಳಿದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಈ ದಾಖಲೆಯನ್ನು ನಿಮ್ಮ ವಕೀಲರಿಗೆ ಯಾವಾಗ ಕೊಟ್ಟಿರಿ ಎಂದರೆ ಸಾಕ್ಷಿ ನನ್ನ ಅಣ್ಣ ಕೊಟ್ಟಿದ್ದರು ಎನ್ನುತ್ತಾರೆ. ನಿಡಿ-45 ನ್ನು ಬರೆಯಲು ಸ್ಟಾಂಪ್ ಪೇಪರ್ ಅನ್ನು ಶ್ರೀಮತಿ ಎಂ.ಕೆ.ಜೈಬುನ್ನಿಸಾರವರು ಹಾಗೂ ಅವರ ಪತಿ ನಿಸ್ಸಾರ್ ಅಹಮ್ಮದ್ ರವರು ಕೊಂಡಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

14) ನಾನು, ನನ್ನ ಅಣ್ಣ ಹಾಗೂ ನನ್ನ ತಂದೆ ಕೆ.ಆರ್.ನಗರದ ಮುಸ್ಲಿಂ ಬ್ಲಾಕ್ ನಲ್ಲಿರುವ 2-3 ವಿವಾದಿತ ಸ್ವತ್ತುಗಳನ್ನು ಕೊಂಡಿದ್ದು, ಅವುಗಳ ಕುರಿತು ನ್ಯಾಯಾಲಯದಲ್ಲಿ ವಿವಾದಗಳು ನಡೆಯುತ್ತಿವೆ ಎಂದರೆ ಸುಳ್ಳು. ಇದೇ ನ್ಯಾಯಾಲಯದಲ್ಲಿ ನನ್ನ ಮೇಲೆ ಒಂದು ಮೇಲ್ಮನವಿ ಪ್ರಕರಣ ನಡಯುತ್ತಿದೆ ಎಂದರೆ ಸರಿ. ಮೊಹಮ್ಮದ್ ಕಾನೂನಿನ ಪ್ರಕಾರ ನಿಸ್ಸಾರ್ ಅಹಮ್ಮದ್‌ರವರಿಗೆ ಮಕ್ಕಳಿಲ್ಲದ ಕಾರಣ ಹಿಬಾ ನಾಮಾ ಬರೆಯಲು ಅವಕಾಶ ಇಲ್ಲ ಎಂದರೆ ಸರಿಯಲ್ಲ. ನಿಸ್ಸಾರ್ ಅಹಮ್ಮದ್ ರವರು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ನಿಸ್ಸಾರ್ ಅಹಮ್ಮದ್ ರವರು ಉರ್ದು ಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಸ್ಸಾರ್ ಅಹಮ್ಮದ್ ರವರು ಶಾಲಾ ಶಿಕ್ಷಕರಾಗಿ ಕೆಲಸ ಮಾಡುವಾಗಲೇ ಮಾನಸಿಕವಾಗಿ ಅಸ್ವಸ್ಥರಾಗಿ ಮನೆಗೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.